ಉತ್ತರವೂ ದೊರೆಯುವುದಿಲ್ಲವೆಂದು. ಸುಮ್ಮನೆ ಕಿಟಕಿಯ ಗಾಜಿನಾಚೆ ಕಾಣುವ ನಗರದ ದೊಡ್ಡ ದೊಡ್ಡ ಇಮಾರತ್ತುಗಳನ್ನು ನೋಡುತ್ತಾ ಕುಳಿತುಬಿಟ್ಟಳು.

ಸ್ವಲ್ಪ ಹೊತ್ತಿನಲ್ಲಿ ಇಮಾರತ್ತುಗಳ ಸರಣಿ ಮುಗಿದು, ನಗರದ ಹೊರವಲಯ ಪ್ರದೇಶ ಆರಂಭವಾಯಿತು. ದೊಡ್ಡ ದೊಡ್ಡ ತಾಳೆ ಮರಗಳ ಸಾಲು ಕಾಣತೊಡಗಿದವು. ಕಡಲು ಬಹುಶಃ ಹತ್ತಿರದಲ್ಲೇ ಇತ್ತೇನೋ... ತಲ್ಲಣದಲ್ಲಿ ಅವಳ ಉಸಿರೂ ಉಪ್ಪುಪ್ಪಾಗತೊಡಗಿತು. ತನ್ನ ಕೈಗಳು ತಾಳೆ ಮರದ ಎಲೆಗಳೋಪಾದಿ ಕಂಪಿಸುತ್ತಿರುವಂತೆ ತೋರಿತು ಅವಳಿಗೆ. ಬಹುಶಃ ಅವನ ಮನೆ ಹತ್ತಿರ ಬಂದಿರಬಹುದು.

ಮರಗಳು ಹಸಿರೆಲೆಗಳಿಂದಾವೃತವಾದ ಒಂದು ಪುಟ್ಟ ಬಂಗಲೆಯ ಎದುರು ಗಾಡಿ ನಿಂತಿತು. ಅವಳೂ ಇಳಿದಳು. ಒಳಹೋಗುವ ಮೊದಲು ಅಲ್ಲೇ ಹತ್ತಿರದ ಬಾಳೆ ಗಿಡದಡಿಯಲ್ಲಿ ತುಸು ನಿಂತಳು. ಕಂಪಿಸುವ ಬಾಳೆ ಎಲೆಗಳ ನಡುವೆ ಥರಗುಡುವ ತನ್ನ ಕೈಗಳನ್ನು ಬಚ್ಚಿಡಬೇಕೆಂದು ಆ ಕ್ಷಣ ತೀವ್ರವಾಗಿ ಅನಿಸಿತವಳಿಗೆ. ಅವನೊಂದಿಗೇ ಅವಳು ಬಂಗಲೆಯ ಒಳಗೆ ಹೋಗಬಹುದಿತ್ತು, ಅಲ್ಲಿ ಈ ಕೈಗಳ ಅಗತ್ಯವೂ ಇದ್ದಿಲ್ಲ. ಬಹುಶಃ ಈ ಕೈಗಳಿಂದ ಈಗ ಅವನಿಗೆ ಏನನ್ನೂ ಕೊಡಲಾರಳು, ಏನನ್ನೂ ಪಡೆಯಲಾರಳು.

ಗಾಡಿಯ ಸದ್ದು ಕೇಳಿತೆಂದು ತೋರುತ್ತದೆ, ಅವನ ಅಮ್ಮ ಹೊರ ಬಂದರು. ಎಂದಿನಂತೆ ಹಣೆಗೆ ಮುತ್ತಿಟ್ಟು 'ಬಾ ಮಗಳೇ' ಎಂದು ಬರಮಾಡಿಕೊಂಡರು.

ಈ ಬಾರಿ ಅವಳು ಬಹಳ ದಿನಗಳ ನಂತರ ಅವನ ಅಮ್ಮನನ್ನು ಕಂಡಿದ್ದಳು. ಅಮ್ಮ ಅವಳ ತಲೆಯ ಮೇಲಿನಿಂದ ಮಣಭಾರವನ್ನು ಇಳಿಸುವವರಂತೆ ಅವಳ ತಲೆಯನ್ನು ಪ್ರೀತಿಯಿಂದ ನೇವರಿಸುತ್ತಾ ಒಳಗೆ ಕರೆದೊಯ್ದು – ಏನು ಕುಡಿಯುತ್ತೀ ಮಗಳೇ? ಎಂದು ಉಪಚರಿಸತೊಡಗಿದ್ದರು.

ಅಷ್ಟರಲ್ಲಿ ಅವನೂ ಮನೆಯೊಳಗೆ ಬಂದಾಗಿತ್ತು. ತಾಯಿಯನ್ನುದ್ದೇಶಿಸಿ ಹೇಳಿದ – ಮೊದಲು ಚಾಯ್ ಆಗಲಿ, ನಂತರ ಊಟ.

ಡ್ರೈವರ್ ಗಾಡಿಯಿಂದ ಅವಳ ಸೂಟ್‌ಕೇಸ್ ಎತ್ತಿಕೊಂಡು ಬರುವುದು ಆಕೆಯ ಕಣ್ಣಿಗೆ ಬಿತ್ತು. ಅವಳು ಅವನನ್ನುದ್ದೇಶಿಸಿ ಮೆಲ್ಲಗೇ ಉಸುರಿದಳು, 'ಸಮಯ ತೀರಾ ಕಡಿಮೆಯಿದೆ, ಏರ್‌ಪೋರ್ಟನ್ನು ತಲುಪುತ್ತೀನಾ .....ಅನುಮಾನ'

ಅವನು ಅವಳತ್ತ ಗಮನ ಕೊಡದೇ ಡ್ರೈವರನಿಗೆ ಹೇಳಿದ – 'ನಾಳೆ ಮುಂಜಾನೆ ಹೋಗಿ ನಾಡದ್ದಿನ ಟಿಕೆಟ್ ತಕೊಂಡು ಬಾ' ಮತ್ತೆ ತಾಯಿಯತ್ತ ತಿರುಗಿ – 'ಬಹಳ ದಿನಗಳಿಂದ ನೀನೇನೋ ನನ್ನ ಗೆಳೆಯರಿಗೆಲ್ಲ ಊಟಕ್ಕೆ ಕರೀಬೇಕು ಅಂತಿದ್ದೆಯಲ್ಲ, ನಾಳೆ ಕರೆಯೋಣ' ಎಂದ.

ಅವಳು ನಿರಾಸೆ ಮತ್ತು ನಿರೀಕ್ಷೆಯ ಕಣ್ಣುಗಳಿಂದ ಅವನ ಜೇಬಿನತ್ತಲೇ ನೋಡುತ್ತಿದ್ದಳು. ಅದರಲ್ಲಿ ಅವಳ ಹಿಂದಿರುಗುವ ವಿಮಾನದ ಟಿಕೆಟ್ ಕುಳಿತು ಅಣಕಿಸುತ್ತಿತ್ತು. –'ಸುಮ್ಮನೇ ಟಿಕೆಟ್ ಹಾಳಾಗುತ್ತದೆ'.

ಅಡುಗೆ ಮನೆಯತ್ತ ಹೊರಟಿದ್ದ ಅಮ್ಮ ಕ್ಷಣ ನಿಂತು, ಅವಳ ಭುಜವನ್ನು ಮಮತೆಯಿಂದ ಅದುಮಿ 'ಟಿಕೆಟ್ ಏನು ಮಹಾ ದೊಡ್ಡದು ಮಗಳೇ, ಇಷ್ಟು ಅಕ್ಕರಾಸ್ಥೆಯಿಂದ ಹೇಳ್ತಿದಾನೆ...ಇರು ಒಂದಿನ' ಎಂದು ಆಗ್ರಹಪಡಿಸಿದರು

'ಯಾತಕ್ಕೆ?' ಅವಳ ಮನದಲ್ಲಿ ಒಂದು ಪ್ರಶ್ನೆ ಸರ್‍ರನೆ ಹಾದುಹೋಯಿತು. ಆದರೆ ಏನನ್ನೂ ಅನ್ನಲಾಗಲಿಲ್ಲ. ಮೌನವಾಗಿ ಕುರ್ಚಿಯಿಂದೆದ್ದು ಕೋಣೆಯೆದುರಿನ ವರಾಂಡದಲ್ಲಿ ಹೋಗಿ ನಿಂತುಕೊಂಡಳು. ಎದುರು ದೂರ ದೂರದವರೆಗೂ ತಾಳೆಯ ಮರಗಳಿದ್ದವು. ಇನ್ನೊಂದೆಡೆ ಸಮುದ್ರವಿತ್ತು. ಕಡಲಿನ ಮೊರೆತ ಕೇಳಿಬರುತ್ತಿತ್ತು. ಅವಳಿಗನಿಸಿತು ... ಈ 'ಯಾಕೆ' ಎನ್ನುವುದು ಇಂದಿನ ಪ್ರಶ್ನೆ ಮಾತ್ರ ಅಲ್ಲ. ಅವಳ ಬದುಕಿನ ಎಷ್ಟೋ 'ಯಾಕೆ'ಗಳು ಅವಳ ಮನದ ಕಡಲ ತಡಿಯಲ್ಲಿ ಈ ತಾಳೆ ಮರಗಳಂತೆ ಬೆಳೆದು ನಿಂತಿವೆ. ಮತ್ತು ಅನೇಕ ವರ್ಷಗಳಿಂದ ಅವುಗಳ ಎಲೆಗಳು ಗಾಳಿಯಲ್ಲಿ ಕಂಪಿಸುತ್ತಿವೆ ಉತ್ತರ ಸಿಗದೇ.

ಅವಳು ಆ ಮನೆಯ ಅತಿಥಿಯಂತೆ ಚಾಯ್ ಕುಡಿದಳು, ರಾತ್ರಿ ಭೋಜನವನ್ನು ಮಾಡಿದಳು. ಬಚ್ಚಲು ಮನೆಯಲ್ಲಿ ಎಂದು ಕೇಳಿ, ಹೋಗಿ ಬಟ್ಟೆ ಬದಲಿಸಿ ಬಂದಳು. ಮನೆಯಲ್ಲಿ ಉದ್ದದ ನಡುಮನೆಯಿತ್ತು. ಡ್ರಾಯಿಂಗ್ ಮತ್ತು ಡೈನಿಂಗ್ ಸೇರಿ. ಇದಲ್ಲದೇ ಎರಡು ಕೋಣೆಗಳಿದ್ದವು. ಒಂದು ಅವನದು. ಇನ್ನೊಂದು ಅಮ್ಮನದು. ಅಮ್ಮ ಹಠಮಾಡಿ ಅವಳಿಗೆ ತನ್ನ ಕೋಣೆ ಬಿಟ್ಟುಕೊಟ್ಟು ತಾವು ನಡುಮನೆಯಲ್ಲಿ ಮಲಗಿದರು.